# ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು, ಇವರ ನ್ಯಾಯಾಲಯ,

## ಚನ್ನಗಿರಿ

## ಓ.ಎಸ್ ನಂ: 265/2024

ವಾದಿ : ತಿಪ್ಪೇಸ್ವಾಮಿ

ವಿರುದ್ಧ/-

ಪ್ರತಿವಾದಿ: ಹನುಮಂತಪ್ಪ

## : ವಾದಿಯ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಪಿ.ಡಬ್ಲ್ಯೂ- 1 :

ನಾನು ಶ್ರೀ ಕೆ.ಓ. ತಿಪ್ಪೇಸ್ವಾಮಿ ಬಿನ್ ಕೆ.ಜಿ. ಓಂಕಾರಪ್ಪ, ವಯಸ್ಸು ಸುಮಾರು 53 ವರ್ಷ, ವ್ಯವಸಾಯಗಾರರು, ವಾಸ ಚನ್ನಗಿರಿ ಟೌನ್, ಚನ್ನಗಿರಿ ತಾಲ್ಲೂಕು ದಾವಣಗೆರೆ ಜಿಲ್ಲೆ. ಆದ ನಾನು ಈ ಕೇಸಿನಲ್ಲಿ ವಾದಿಯಾಗಿದ್ದು ಸತ್ಯ ಪ್ರತಿಜ್ಞೆ ಮಾಡಿ ನುಡಿಯುವುದೇನೆಂದರೇ;

ದಾವಾ ಶೆಡ್ಯೂಲ್ ಆಸ್ತಿಯ ದಾರಿಯಲ್ಲಿಯೇ ಹೋಗುವುದು ಮತ್ತು ಬರುವುದು ಮತ್ತು ನನ್ನ ಹಿಸ್ಸೆಗೆ ಬಂದ ಆಸ್ತಿಯನ್ನು ಸ್ವತಹ ಅನುಭವಿಸಲು ದಾವಾ ಶೆಡ್ಯೂಲ್ ಆಸ್ತಿಯನ್ನು ಹೊರತುಪಡಿಸಿ ಬೇರೆ ಯಾವುದೇ ದಿಕ್ಕಿನಿಂದಲೂ ನನ್ನ ಜಮೀನಿಗೆ ಓಡಾಡಲು ರಸ್ತೆ ಅಥವಾ ದಾರಿ ಇಲ್ಲದೇ ಇರುವುದರಿಂದ ನಾನು ನನ್ನ ಸಹೋದರನಾದ ಎದುರುದಾರರ ಮೇಲೆ ಇಸ್‌ಮೆಂಟ್ ಆಫ್ ನೆಸೆಸಿಟಿ ಆಫ್ ದಾರಿಗಾಗಿ ಹಾಗೂ ಖಾಯಂ ಮಾನಾಹಿ ಹುಕುಂ ನೀಡುವಂತೆ ಕೋರಿ, ಸದರಿ ದಾವೆಯನ್ನು ದಾಖಲೆ ಮಾಡಿರುತ್ತೇನೆ.

ಮುಂದುವರೆದು ಸನ್ನಿಧಿ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ದಾವಾ ಶೆಡ್ಯೂಲ್ ಸರ್ವೆ ನಂ 17/7 ರ ವಿಸ್ತೀರ್ಣ 4 ಎಕರೆ ಜಮೀನಿದ್ದು, ಸದರಿ ಜಮೀನು ಲಕ್ಷ್ಮೀಸಾಗರ ಗ್ರಾಮ, ಕಸಬಾ ಹೋಬಳಿ, ಚನ್ನಗಿರಿ ತಾಲ್ಲೂಕು, ಇದ್ದು, ಮೊದಲು ಸದರಿ ಜಮೀನನ್ನು ಶುದ್ಧ ಕ್ರಯ ರೂ 500/- ರೂಗಳಿಗೆ ಕೊಂಡುಕೊಂಡಿದ್ದು, ಅದೇ ದಿನ ಸದರಿ ಜಮೀನಿನ ಸ್ವಾಧೀನವನ್ನು ನನ್ನ ತಂದೆಗೆ ವಹಿಸಿಕೊಟ್ಟಿರುತ್ತಾರೆ. ಆ ಲಾಗಾಯ್ತಿನಿಂದ ನನ್ನ ತಂದೆಯವರು ಸದರಿ ಜಮೀನಿನ ಮಾಲೀಕರಾಗಿ, ಖಾತೆದಾರರಾಗಿ ಅನುಭವದರರಾಗಿ ಅನುಭವಿಸಿಕೊಂಡು ಬಂದಿರುತ್ತಾರೆ. ಸದರಿ ಜಮೀನಿನ ಕ್ರಯಪತ್ರದಂತೆ ಚಕ್ಕುಬಂದಿ :- ಪೂರ್ವಕ್ಕೆ:- ಕಾಳನಾಯಕನ ಜಮೀನು, ಪಶ್ಚಿಮಕ್ಕೆ:- ದನ್ಯಾ ನಾಯ್ಕನ ಜಮೀನು, ಉತ್ತರಕ್ಕೆ:- ಕುರುಬರ ಚಿಕ್ಕಣ್ಣನ ಜಮೀನು, ದಕ್ಷಿಣಕ್ಕೆ:- ರಸ್ತೆ. ಸದರಿ ರಸ್ತೆಯ ನಂತರ ರಾಯಪ್ಪನ ಜಮೀನು ಬರುತ್ತದೆ.

ಮುಂದುವರೆದು ಸನ್ನಿಧಿ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಸದರಿ ಸರ್ವೆ ನಂ 17/7 ಆಳತೆ ಆದಾ ನಂತರ ಮತ್ತು ಸರ್ವೆ ಸೆಟಲ್‌ಮೆಂಟ್ ಆದ ನಂತರ ಹೊಸ ಸರ್ವೆ ನಂ 73 ಆಗಿದ್ದು, ಸದರಿ ಸರ್ವೆ ನಂ 73 ಕಂದಾಯ ದಾಖಲೆಯಲ್ಲಿ ಹೆಚ್ಚುವರಿಯಲ್ಲಿ ಕಂದಾಯ ಇಲಾಖೆಯವರು ಅಂಗೀಕರಿಸಿರುತ್ತಾರೆ.

ಕೆ.ಓ ತಿಪ್ಪೇಸ್ವಾಮಿ

NOTARY GOVT. OF KARNATAKA B.A.,L.B. Channagiri Rev. Tq.

NO. OF CORRECTIONS

ಸದರಿ ಸರ್ವೇ ನಂಬರ್ ಜಮೀನನ್ನು ಒಟ್ಟು ಕುಟುಂಬದ ಸದಸ್ಯರಾಗಿ ನಾನು, ಪ್ರತಿವಾದಿ ಹಾಗೂ ನನ್ನ ತಂದೆ ಜಂಟಿಯಾಗಿ ಅನುಭವಿಸಿಕೊಂಡು ಬರುತ್ತಿದ್ದು, ತದನಂತರ ದಿನಾಂಕ:-23-08-1999 ರಂದು ನಾನು ಪ್ರತಿವಾದಿ ಹಾಗೂ ನನ್ನ ತಂದೆಯವರು ಸೇರಿಕೊಂಡು ನೋಂದಾಯಿತ ಪಾಲು ವಿಭಾಗ ಪತ್ರವನ್ನು ಈ ಪತ್ರದ ಸಂಖ್ಯೆ: 1426/1999-2000 ರಂದು ನೋಂದಣಿಯಾಗಿದ್ದು, ಸದರಿ ವಿಭಾಗ ಪತ್ರದ ದಿನವೇ ನನ್ನ ಹಿಸ್ಸೆಗೆ ಬಂದ ದಾವಾ ಶೆಡ್ಯೂಲ್ ಆಸ್ತಿಯ ಸ್ವಾಧೀನವನ್ನು ಪಡೆದುಕೊಂಡಿರುತ್ತೇನೆ. ಅದೇ ಪ್ರಕಾರ ಪ್ರತಿವಾದಿಯು ತನ್ನ ಹಿಸ್ಸೆಗೆ ಬಂದ ಆಸ್ತಿಯನ್ನು ಸ್ವಾಧೀನಕ್ಕೆ ವಹಿಸಿಕೊಂಡಿರುತ್ತಾರೆ.

ಮುಂದುವರೆದು ಸನ್ನಿಧಿ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಸದರಿ ಸರ್ವೇ ನಂಬರ್ ಜಮೀನಿನಲ್ಲಿ 1 ಎಕರೆ ಜಮೀನನ್ನು ಪೌತಿ ಶ್ರೀಮತಿ ಅನುಸೂಯಮ್ಮ ಕೋಂ ಪೌತಿ ಈಶ್ವರಪ್ಪ ಇವರಿಗೆ ದಿನಾಂಕ:-23-08-1999ರ ವಿಭಾಗದಲ್ಲಿ ಕೊಟ್ಟಿದ್ದು, ಸದರಿ 1 ಎಕರೆ ಜಮೀನನ್ನು ಶ್ರೀಮತಿ ಅನುಸೂಯಮ್ಮ ನವರು ಹಕ್ಕುದಾರರಾಗಿ, ಖಾತೆದಾರರಾಗಿ, ಅನುಭವಿಸಿಕೊಂಡು ಬಂದಿರುತ್ತಾರೆ. ತದನಂತರ ಸದರಿ ಶ್ರೀಮತಿ ಅನುಸೂಯಮ್ಮ ನವರು ನನಗೆ ದಿನಾಂಕ:-26-02-2005 ರಂದು ನೋಂದಾಯಿತ ಮರಣ ಶಾಸನ ಪತ್ರದ 1 ಎಕರೆ ಜಮೀನನ್ನು ಪತ್ರದ ಸಂಖ್ಯೆ: 121/2004-05 ರಂದು ನನ್ನ ಹೆಸರಿಗೆ ಚನ್ನಗಿರಿ ಉಪನೋಂದಣಾಧಿಕಾರಿಗಳವರ ಕಛೇರಿಯಲ್ಲಿ ನೋಂದಾಯಿಸಿಕೊಟ್ಟಿರುತ್ತಾರೆ. ಸದರಿ ಅನುಸೂಯಮ್ಮನವರು ದಿನಾಂಕ:-12-03-2005 ರಂದು ಮರಣ ಹೊಂದಿರುತ್ತಾರೆ. ಕೂಡಲೇ ನಾನು ಸದರಿ ಜಮೀನಿನ ಹಕ್ಕುದಾರನಾಗಿ, ಅನುಭವದಾರನಾಗಿ, ಅನುಭವಿಸಿಕೊಂಡು ಬಂದಿರುತ್ತೇನೆ ಮತ್ತು ಸದರಿ ಆಸ್ತಿಯ ಖಾತೆ ನಂಬರ್ 6/2005-06 ರಂತೆ ಕಂದಾಯ ಇಲಾಖೆಯವರು ಅಂಗೀಕರಿಸಿದ್ದು, ಸದರಿ ಆಸ್ತಿಯ ಖಾತೆದಾರರಾಗಿ, ಅನುಭವದಾರರಾಗಿ, ಅನುಭವಿಸಿಕೊಂಡು ಬರುತ್ತಿದ್ದೇನೆ.

ಮುಂದುವರೆದು ಸನ್ನಿಧಿ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಸದರಿ ಸರ್ವೇ ನಂಬರ್‌ನ ದಕ್ಷಿಣ ದಿಕ್ಕಿನಲ್ಲಿರುವ ರಸ್ತೆಯಿಂದ ಪ್ರತಿವಾದಿಯ ಜಮೀನಿನ ಪೂರ್ವದ ಹಂಚಿನಲ್ಲಿ ದಕ್ಷಿಣದಿಂದ ಉತ್ತರಕ್ಕೆ, ಉತ್ತರದಲ್ಲಿರುವ ನನ್ನ ಹಿಸ್ಸಾ ಜಮೀನಿಗೆ ನಾನು ನನ್ನ ವ್ಯವಸಾಯದ ಉಪಕರಣಗಳನ್ನು ಹಾಗೂ ನನ್ನ ವಾಹನಗಳಾದ ಟ್ರ್ಯಾಕ್ಟರ್ ಹಾಗೂ ಎತ್ತಿನ ಬಂಡಿ ಮುಖಾಂತರ ಓಡಾಡಿಕೊಂಡು, ವ್ಯವಸಾಯ ಮಾಡಿಕೊಂಡು ಬರುತ್ತಿದ್ದೇನೆ. ಸದರಿ ವಿಚಾರ ಪ್ರತಿವಾದಿಗೆ ಸಂಪೂರ್ಣ ಮಾಹಿತಿಯಿರುತ್ತದೆ. ಈಗಿದ್ದಾಗ್ಯೂ ಕೂಡ ಪ್ರತಿವಾದಿಯು ನನ್ನ ಅನುಭವಕ್ಕೆ ಮತ್ತು ನಾನು ಓಡಾಡುವ ರಸ್ತೆಗೆ ತಂಟೆ-ತಕರಾರು ಮಾಡಿದ್ದರಿಂದ ನಾನು ಚನ್ನಗಿರಿ ಪೋಲೀಸ್ ರವರಿಗೆ ದೂರನ್ನು ದಾಖಲೆ ಮಾಡಿದಾಗ ಸದರಿ ಪೋಲಿಸ್ ಅಧಿಕಾರಿಗಳು ಸಿವಿಲ್ ವ್ಯಾಜ್ಯವೆಂದು ತಿಳಿಸಿ, ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ಸೂಚಿಸಿರುತ್ತಾರೆ.

ಮುಂದುವರೆದು ಸನ್ನಿಧಿ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ,ನಮ್ಮ ವಿಭಾಗ ಪತ್ರದಲ್ಲಿ ಪ್ರತಿವಾದಿಯ ಹಿಸ್ಸಾ ಜಮೀನಿಗೆ ಪೂರ್ವ ದಿಕ್ಕಿನಲ್ಲಿ ದಾರಿ ಇರುವುದನ್ನು ಮತ್ತು ದಕ್ಷಿಣದಲ್ಲಿ ಇರುವ ರಸ್ತೆಯನ್ನು ಸಹಾ ತಪ್ಪಾಗಿ ಪತ್ರದಲ್ಲಿ ದಕ್ಷಿಣ ದಿಕ್ಕಿಗೆ ಕುರುಬರ ರಾಮಪ್ಪ

NOTARY

NO. OF CORRECTIONS

ಎಂದು ನಮೂದಾಗಿರುತ್ತದೆ. ಆದರೆ ನಮ್ಮ ಸರ್ವೇ ನಂಬರ್‌ನ ದಕ್ಷಿಣ ದಿಕ್ಕಿಗೆ ಪೂರ್ವದಿಂದ-ಪಶ್ಚಿಮಕ್ಕೆ ಅಧಿಕೃತ ರಸ್ತೆಯಿರುತ್ತದೆ.

ಮುಂದುವರೆದು ಸನ್ನಿಧಿ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಎದುರುದಾರನು 2024ನೇ ಆಗಸ್ಟ್ ಮೊದಲನೇ ವಾರದಲ್ಲಿ ನನಗೆ ಮತ್ತು ನನ್ನ ವ್ಯವಸಾಯದ ಉಪಕರಣಗಳನ್ನು ತೆಗೆದುಕೊಂಡು ಹೋಗುವಾಗ ತಡೆದು, ತಂಟೆ ತಕರಾರು ಮಾಡಿದ್ದರಿಂದ, ನಾನು ಎದುರುದಾರರ ಮೇಲೆ ಈ ದಾವೆಯನ್ನು ದಾಖಲೆ ಮಾಡುವ ಪ್ರಸಂಗ ಬಂದಿರುತ್ತದೆ.

ಮುಂದುವರೆದು ಸನ್ನಿಧಿ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಎದುರುದಾರನು ತಮ್ಮ ವಕೀಲರ ಮೂಲಕ ಹಾಜರಾಗಿ ಸದರಿ ತಕರಾರಿನಲ್ಲಿ ನಿಜಸಂಗತಿಯನ್ನು ಮರೆಮಾಚಿ ಕೇವಲ ತಮ್ಮ ಅನುಕೂಲಕ್ಕೆ ತಕ್ಕಂತೆ ಸುಳ್ಳು ತಕರಾರು ಸಲ್ಲಿಸಿ, ಸುಳ್ಳು ಪ್ರತಿಪಾದನೆ ಮಾಡಿರುತ್ತಾರೆ. ಆದ್ದರಿಂದ ಎದುರುದಾರರ ತಕರಾರನ್ನು ತಳ್ಳಿಹಾಕಿ ನನ್ನ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಲು ಸನ್ನಿಧಿ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ನಾನು ನನ್ನ ದಾವೆಯನ್ನು ಸಾಬೀತು ಪಡಿಸಲು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ನಿಶಾನೆಗೊಳಿಸಬೇಕಾಗಿ ಸನ್ನಿಧಿ ನ್ಯಾಯಾಲಯಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಮೇಲೆ ಹೇಳಿದ ಎಲ್ಲಾ ಅಂಶಗಳನ್ನು ಪರಿಗಣಿಸಿ ನಾನು ದಾವೆಯಲ್ಲಿ ಕೇಳಿಕೊಂಡಂತೆ ಎದುರುದಾರರ ವಿರುದ್ದ ಡಿಕ್ರಿ ಮಾಡಲು ಘನ ಸನ್ನಿಧಿ ನ್ಯಾಯಾಲಯದಲ್ಲಿ ಪ್ರಮಾಣ ಪೂರ್ವಕವಾಗಿ ಸತ್ಯ ಹಾಗೂ ಸರಿಯಾಗಿದೆ ಎಂದು ಪ್ರಮಾಣ ಮಾಡಿ ನುಡಿಯುತ್ತೇನೆ.

NOTARY
RAJAPPA.V.R
B.A. LL.B
Channagiri Rev. Tq.
LAW-LCL/109/2020
Valid : 30-6-2022
Exp.: 30-6-2027
GOVT. OF KARNATAKA

ಗುರುತುಬಲ್ಲವರು

ನ್ಯಾಯಾವಾದಿಗಳು

ಪ್ರಮಾಣಕರ್ತ

ಸ್ಥಳ: ಚನ್ನಗಿರಿ

ದಿನಾಂಕ:09-12-2025

SWORN TO BEFORE ME

RAJAPPA.V.R
Advocate & Notary
Reg.No. 109/2020
...GIRI
9-12-25

NO. OF CORRECTIONS Nil